KARNATAKA LOKAYUKTA

No.UPLOK-2/DE/409/2017/ARE-13

Multi Storied Building,
Dr. B.R. Ambedkar Veedhi,
Bengaluru-560 001.
Dated 25.07.2022.

## RECOMMENDATION

Sub:- Departmental inquiry against Sri S.Rajakumar, the then Panchayath Development Officer, Kaliyuru Grama Panchayath, T.Narasipura Taluk, Mysore District – reg.

Ref:- Government Order No.RDP 910 GPS 2016 dated 28.02.2017.

2) Nomination order No. UPLOK-2/DE/409/2017 dated 18.03.2017 of Hon'ble Upalokayukta, State of Karnataka.

3) Inquiry report dated 16.07.2022 of Additional Registrar of Enquiries-13, Karnataka Lokayukta, Bengaluru.

~~~~~~

The Government by its orders dated 28.02.2017 initiated the disciplinary proceedings against Sri S.Rajakumar, the then Panchayath Development Officer, Kaliyuru Grama Panchayath, T.Narasipura Taluk, Mysore District, [hereinafter referred to as Delinquent Government Official, for short as ' DGO ' ] and entrusted the Departmental Inquiry to this Institution.
~~~~~~

2. This Institution by Nomination Order No. UPLOK-2/DE/409/2017 dated 18.03.2017 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct said to have been committed by him. Subsequently, the matter was transferred to Additional Registrar of Enquiries-13 to continue the said inquiry.

3. The DGO was tried for the charge of committing several irregularities in maintenance of registers/documents in the Grama Panchayath and thereby committing misconduct.

4. The Inquiry Officer (Additional Registrar of Enquiries-13) on proper appreciation of oral and documentary evidence has held that, the Disciplinary Authority has *'not proved'* the above charge against the DGO Sri S.Rajakumar, the then Panchayath Development Officer, Kaliyuru Grama Panchayath, T.Narasipura Taluk, Mysore District.

5. On perusal of the entire materials on record, I do not find any reason to deviate from the opinion expressed by the Inquiry Officer. Hence, it is hereby recommended to the Government to accept the report of Inquiry Officer and exonerate the DGO Sri S.Rajakumar, the then Panchayath Development Officer, Kaliyuru Grama Panchayath, T.Narasipura Taluk, Mysore District, of the charges leveled against him.

6. Action taken in the matter shall be intimated to this Authority.

Connected records are enclosed herewith.

25/7/22

**(JUSTICE K.N.PHANEENDRA)**
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/409/2017/ಎಆರ್ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 16/07/2022.

## ವಿಚಾರಣಾ ವರದಿ

**ಉಪಸ್ಥಿತರು:** **ಶೋಭಾ ಎಸ್,**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:-** ಶ್ರೀ. ಎಸ್. ರಾಜಕುಮಾರ್, ಹಿಂದಿನ ಕಾರ್ಯದರ್ಶಿ, ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಲಿಯೂರು ಗ್ರಾಮ ಪಂಚಾಯತ್, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:-** 1. ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್/2350/2014/ಡಿ.ಆರ್.ಇ-4, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ : 15/12/2016.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/910/ಗ್ರಾಪಂಕಾ/2016, ಬೆಂಗಳೂರು, ದಿನಾಂಕ: 28/02/2017.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/409/2017, ಬೆಂಗಳೂರು, ದಿನಾಂಕ: 18/03/2017.

* * * *

1. ದೂರುದಾರರಾದ ಶ್ರೀ. ಶಾಂತ ಬಿನ್ ಚಿಕ್ಕೂಸು, ಕಲಿಯೂರು ಗ್ರಾಮ ಪಂಚಾಯತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ ಶ್ರೀ. ಎಸ್. ರಾಜಕುಮಾರ್, ಹಿಂದಿನ ಕಾರ್ಯದರ್ಶಿ, ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಲಿಯೂರು ಗ್ರಾಮ ಪಂಚಾಯತ್, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ಆ.ಸ.ನೌ ರವರು ತೆರಿಗೆ ವಸೂಲಾತಿಯಲ್ಲಿ ಸರ್ಕಾರಕ್ಕೆ ಕಟ್ಟಬೇಕಾದ ಬಾಕಿ ಹಣವನ್ನು ಕಟ್ಟಿರುವುದಿಲ್ಲವೆಂದು ಆರೋಪಿಸಿ, ಆ.ಸ.ನೌ ರವರ ಮೇಲೆ ಕ್ರಮ ಕೈಗೊಳ್ಳುವಂತೆ ದೂರನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ(2) ರಲ್ಲಿ ಕಾಣಿಸಿದಂತೆ, ದಿನಾಂಕ: 28/02/2017 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 18/03/2017 ರಂದು ಅಪರ ನಿಬಂಧಕರು (ವಿಚಾರಣೆಗಳು-4) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 06/07/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

4. ಅಧಿಕೃತ ಜ್ಞಾಪನ ಸಂಖ್ಯೆ: ಉಪಲೋಕ್-1 & 2/ಡಿಇ/ವರ್ಗಾವಣೆ/2018, ದಿನಾಂಕ:06/08/2018 ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶದಂತೆ ಸದರಿ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರಿಂದ ಅಪರ ನಿಬಂಧಕರು (ವಿಚಾರಣೆಗಳು-13) ಶಾಖೆಗೆ ವರ್ಗಾವಣೆಗೊಂಡಿರುತ್ತದೆ.

## ಅನುಬಂಧ-1
## ದೋಷಾರೋಪಣೆ

5. ಆಪಾದಿತ ಸರ್ಕಾರಿ ನೌಕರರಾದ/ಶ್ರೀ. ಎಸ್. ರಾಜಕುಮಾರ್, ಹಿಂದಿನ ಕಾರ್ಯದರ್ಶಿ, ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಲಿಯೂರು ಗ್ರಾಮ ಪಂಚಾಯತ್, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಆದ ನೀವು ಗ್ರಾಮ ಪಂಚಾಯತಿಯ ರಸೀತಿ ಪುಸ್ತಕಗಳನ್ನು ಹಾಗೂ ಆಡಿಟ್ ವರದಿಯನ್ನು ಪರಿಶೀಲಿಸಲಾಗಿ, 2011-12 ನೇ ಸಾಲಿನಲ್ಲಿ ರೂ. 68,600/- ಗಳ ತೆರಿಗೆ ವಸೂಲಾತಿ, 2012-13ನೇ ಸಾಲಿನಲ್ಲಿ ರೂ. 1,01,650/- ಗಳ ತೆರಿಗೆ ವಸೂಲಾತಿ ಮತ್ತು 2013-14 ನೇ ಸಾಲಿಗೆ ರೂ.1,37,941/- ಗಳ ತೆರಿಗೆ ವಸೂಲಾತಿ ಮಾಡಲಾಗಿರುವುದು ಕಂಡು ಬರುತ್ತದೆ. ಸದರಿ ಮೇಲ್ಕಂಡ ಮೊತ್ತವನ್ನು ನೀವು-ಆಪಾದಿತ ಸರ್ಕಾರಿ ನೌಕರರು ತೆರಿಗೆ ವಸೂಲಾತಿ ಮಾಡಿದ್ದು, ನಂತರದಲ್ಲಿ ಬ್ಯಾಂಕಿಗೆ ಕಡಿಮೆ ಇರಸಾಲು ಮಾಡಿ ಕರ್ತವ್ಯ ಲೋಪವೆಸಗಿರುತ್ತೀರಿ. ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966 ರ 3 (i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ.

<u>ಅನುಬಂಧ-2</u>

**<u>ದೋಷಾರೋಪಣೆಯ ವಿವರ</u>**

<u>(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)</u>

6. ಶ್ರೀ. ಶಾಂತ ಬಿನ್ ಚಿಕ್ಕೂಸು, ಕಲಿಯೂರು ಗ್ರಾಮ ಪಂಚಾಯತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಸಂಬೋಧಿಸಲಾಗುವ) ರವರು ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

7. <u>ದೂರಿನ ಸಂಕ್ಷಿಪ್ತ ವಿವರಣೆ:-</u>

ದೂರುದಾರರು ತಮ್ಮ ದೂರಿನಲ್ಲಿ ನೀವು-ಆಪಾದಿತ ಸರ್ಕಾರಿ ನೌಕರರು ತೆರಿಗೆ ವಸೂಲಾತಿಯಲ್ಲಿ ಸರ್ಕಾರಕ್ಕೆ ಕಟ್ಟಬೇಕಾದ ಬಾಕಿ ಹಣವನ್ನು ಕಟ್ಟಿರುವುದಿಲ್ಲವೆಂದು ಆರೋಪಿಸಿ ದೂರನ್ನು ಸಲ್ಲಿಸಿದ್ದರು.

8. ಆನಂತರ ಸದರಿ ದೂರಿನ ತನಿಖೆ ಕೈಗೊಳ್ಳಲು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಟಿ. ನರಸೀಪುರ ಇವರಿಗೆ ವಹಿಸಿದ್ದು, ಸದರಿಯವರು ದೂರಿನ ತನಿಖೆ ಕೈಗೊಳ್ಳಲು ಅವರ ಅಧೀನವಾಗಿ ಕರ್ತವ್ಯ ನಿರ್ವಹಿಸುವ ತನಿಖಾ ತಂಡಕ್ಕೆ ವಹಿಸಿದ್ದು, (ಇನ್ನು ಮುಂದೆ ತನಿಖಾಧಿಕಾರಿ ಎಂದು ಸಂಬೋಧಿಸಲಾಗುವುದು) ತದನಂತರ ಸದರಿ ತನಿಖಾ ತಂಡದಿಂದ ಕೂಲಂಕಷವಾಗಿ ಸ್ಥಳ ತನಿಖೆ ನಡೆಸಿ, ವಿವರವಾದ ವರದಿಯನ್ನು ಪಡೆದು, ಸದರಿ ವರದಿಯ ಮೇಲೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಟಿ. ನರಸೀಪುರ ರವರು ಅವರ ಅಭಿಪ್ರಾಯದೊಂದಿಗೆ ಅವರ ವರದಿಯನ್ನು ದಿನಾಂಕ: 30/04/2016 ರಂದು ಸಲ್ಲಿಸಿದ್ದರು.

9. ತನಿಖಾಧಿಕಾರಿಗಳು ಅವರ ವರದಿಯಲ್ಲಿ,

1) ಗ್ರಾಮ ಪಂಚಾಯತಿಯ ರಸೀತಿ ಪುಸ್ತಕಗಳನ್ನು ಪರಿಶೀಲಿಸಲಾಗಿ, 2011-12ನೇ ಸಾಲಿನಲ್ಲಿ ರೂ.68,660/- ಗಳ ತೆರಿಗೆ ವಸೂಲಾತಿ, 2012-13 ನೇ ಸಾಲಿನಲ್ಲಿ ರೂ.1,01,650/- ಗಳ ತೆರಿಗೆ ವಸೂಲಾತಿ ಮತ್ತು 2013-14ನೇ ಸಾಲಿಗೆ ರೂ.1,37,941/- ಗಳ ತೆರಿಗೆ ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

2) ಶ್ರೀ. ದೇವರಾಜು, ಬಿಲ್ ಕಲೆಕ್ಟರ್ ಹಾಗೂ ನೀವು-ಆಪಾದಿತ ಸರ್ಕಾರಿ ನೌಕರರು ನೀವಿಬ್ಬರೂ ತೆರಿಗೆ ವಸೂಲಾತಿ ಮಾಡಿರುತ್ತಾರೆಂದು ಹಾಗೂ ಇವರಿಬ್ಬರಲ್ಲಿ ಯಾರು ಕಡಿಮೆ ಇರಸಾಲು ಮಾಡಿರುತ್ತಾರೆಂದು ತಿಳಿದುಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

10. ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯನ್ನಾಧರಿಸಿ, ತನಿಖಾ ವರದಿಯನ್ನು ಕಳುಹಿಸಿ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿ, ಈ ಸಂಬಂಧ, ನೀವು ನಿಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅವರ ವರದಿಯಲ್ಲಿ ತೆರಿಗೆ ವಸೂಲಾತಿ ಮಾಡಿಕೊಂಡು ಬಿಲ್ ಕಲೆಕ್ಟರ್ ರವರಿಂದ ಪಾವತಿಸಲಾದ ಹಣವನ್ನು ಗ್ರಾಮ ಪಂಚಾಯತ್ ನಿಧಿಗೆ ಪಾವತಿಸಲಾಗಿ, ವಸೂಲಾದ ತೆರಿಗೆ ಹಣವನ್ನು ಬಿಲ್ ಕಲೆಕ್ಟರ್ ಗ್ರಾಮ ಪಂಚಾಯತಿಯ ಪಿ.ಡಿ.ಓ/ಕಾರ್ಯದರ್ಶಿ ರವರಿಗೆ ಹಸ್ತಾಂತರಿಸುವವರೆಗೆ ಹಣ ವಸೂಲಾತಿ ಮಾಡಿದ ಸಿಬ್ಬಂದಿ ವರ್ಗದವರೇ ಆ ಹಣಕ್ಕೆ ಜವಾಬ್ದಾರರಾಗುತ್ತಾರೆ. ನನಗೆ ಹಸ್ತಾಂತರಿಸಿದ ಹಣವನ್ನು ಲೆಕ್ಕಕ್ಕೆ ತೆಗೆದುಕೊಂಡು ಗ್ರಾಮ ಪಂಚಾಯತಿ ನಿಧಿಗೆ ಜಮಾ ಮಾಡುವ ಕೆಲಸವನ್ನು ನಿರ್ವಹಿಸಲಾಗಿದೆ ಎಂದು ತಿಳಿಸಿರುತ್ತೀರಿ.

11. ನೀವು- ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, ಶ್ರೀ ದೇವರಾಜು ರವರಿಂದ, ವಸೂಲಾತಿ ಹಣವನ್ನು ಆ ದಿನವೇ ಅಥವಾ ಮಾರನೇ ದಿನವೇ

ಬ್ಯಾಂಕಿಗೆ ಜಮಾ ಮಾಡುತ್ತಿದ್ದರೆಂದು, ಕೆಲವೊಂದು ಸಂದರ್ಭದಲ್ಲಿ, ನೀವು ಶ್ರೀ. ದೇವರಾಜು ರವರಿಂದ ಪಡೆದುಕೊಂಡು ಬ್ಯಾಂಕಿಗೆ ಜಮಾ ಮಾಡುತ್ತಿದ್ದರೆಂದು ತಿಳಿಸಿದ್ದು, ಆದರೆ, ನೀವು ನಿಮ್ಮ ಆಕ್ಷೇಪಣೆಯಲ್ಲಿ ತೆರಿಗೆ ವಸೂಲಾತಿ ಮಾಡಿಕೊಂಡು ಬಿಲ್ ಕಲೆಕ್ಟರ್ ರವರಿಂದ ಪಾವತಿಸಲಾದ ಹಣವನ್ನು ಗ್ರಾಮ ಪಂಚಾಯತ್ ನಿಧಿಗೆ ಪಾವತಿಸಲಾಗಿದೆ ಎಂದು ವಸೂಲಾದ ತೆರಿಗೆ ಹಣವನ್ನು ಬಿಲ್ ಕಲೆಕ್ಟರ್ ಗ್ರಾಮ ಪಂಚಾಯತಿಯ ಪಿ.ಡಿ.ಓ/ಕಾರ್ಯದರ್ಶಿರವರಿಗೆ ಹಸ್ತಾಂತರಿಸುವವರೆಗೆ ಹಣ ವಸೂಲಾತಿ ಮಾಡಿದ ಸಿಬ್ಬಂದಿ ವರ್ಗದವರೇ ಆ ಹಣಕ್ಕೆ ಜವಾಬ್ದಾರರಾಗುತ್ತಾರೆ. ಹಸ್ತಾಂತರಿಸಿದ ಹಣವನ್ನು ಲೆಕ್ಕಕ್ಕೆ ತೆಗೆದುಕೊಂಡು ಗ್ರಾಮ ಪಂಚಾಯತಿ ನಿಧಿಗೆ ಜಮಾ ಮಾಡುವ ಕೆಲಸವನ್ನು ನಿರ್ವಹಿಸಲಾಗಿದೆ ಎಂದು ತಿಳಿಸಿರುವ ಕಾರಣ ಯಾರು ವಸೂಲಾತಿ ತೆರಿಗೆ ಹಣವನ್ನು ಕಡಿಮೆ ಇರಸಾಲು ಮಾಡಿರುತ್ತಾರೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತಿರುವುದಿಲ್ಲ. ಆದರೆ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಟಿ. ನರಸೀಪುರ ರವರು ಅವರ ವರದಿಯಲ್ಲಿ 2011-12, 2012-13 ಮತ್ತು 2013-14 ನೇ ಸಾಲಿನಲ್ಲಿ ವಸೂಲಾತಿಯಾದ ತೆರಿಗೆ ಹಣವನ್ನು ಆಡಿಟ್ ವರದಿ ಹಾಗೂ ರಸೀದಿ ಪುಸ್ತಕಗಳಿಗೆ ತಾಳೆ ಮಾಡಲಾಗಿ ಕಡಿಮೆ ಇರಸಾಲು ಮಾಡಿರುವುದು ಕಂಡು ಬರುತ್ತದೆಂದು ತಿಳಿಸಿರುವ ಹಿನ್ನೆಲೆಯಲ್ಲಿ ನೀವು ಈ ಕೆಳಕಂಡಂತೆ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಗ್ರಾಮ ಪಂಚಾಯತಿಯ ರಸೀತಿ ಪುಸ್ತಕಗಳನ್ನು ಹಾಗೂ ಆಡಿಟ್ ವರದಿಯನ್ನು ಪರಿಶೀಲಿಸಲಾಗಿ, 2011-12 ನೇ ಸಾಲಿನಲ್ಲಿ ರೂ. 68,600/- ಗಳ ತೆರಿಗೆ ವಸೂಲಾತಿ, 2012-13ನೇ ಸಾಲಿನಲ್ಲಿ ರೂ. 1,01,650/- ಗಳ ತೆರಿಗೆ ವಸೂಲಾತಿ ಮತ್ತು 2013-14 ನೇ ಸಾಲಿಗೆ ರೂ.1,37,941/- ಗಳ ತೆರಿಗೆ ವಸೂಲಾತಿ ಮಾಡಲಾಗಿರುವುದು ಕಂಡು ಬರುತ್ತದೆ.

ಸದರಿ ಮೇಲ್ಕಂಡ ಮೊತ್ತವನ್ನು ಶ್ರೀ. ದೇವರಾಜು ಹಾಗೂ ನೀವು ಇಬ್ಬರು ತೆರಿಗೆ ವಸೂಲಾತಿ ಮಾಡಿದ್ದು, ನಂತರದಲ್ಲಿ ಬ್ಯಾಂಕಿಗೆ ಕಡಿಮೆ ಇರಸಾಲು ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಕಂಡು ಬರುತ್ತದೆ.

12. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ನೀವು-ಆಪಾದಿತ ಸರ್ಕಾರಿ ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೇ, ಕರ್ತವ್ಯ ಲೋಪವೆಸಗಿ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತೀರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

13. ಈ ಮೇಲ್ಕಂಡ ಕಾರಣಗಳಿಂದಾಗಿ, ಆಪಾದಿತ ಸರ್ಕಾರಿ ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರೆಯುವುದು ಅಗತ್ಯ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಸಾಕ್ಷ್ಯದ ಆಧಾರಗಳಿಂದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 3 (1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ನಿಮ್ಮ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ

ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ಪ್ರಾಧಿಕಾರವು ಉಲ್ಲೇಖ ಒಂದರಂತೆ ಈ ಸಂಸ್ಥೆಯಿಂದ ವಿಚಾರಣೆ ಮಾಡಲು ಕೋರಲಾಗಿರುವ ಕಾರಣ ನಿಮ್ಮ ವಿರುದ್ಧ ಈ ಆಪಾದನೆ.

14. ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌ ರವರಿಗೆ ದಿನಾಂಕ : 06/07/2017 ರಂದು ಕಳುಹಿಸಿದ್ದು, ಆ.ಸ.ನೌ ರವರು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿದ್ದು, ದಿನಾಂಕ : 07/08/2017 ರಂದು ಅವರ ಪ್ರಥಮ ಹೇಳಿಕೆಯನ್ನು ಪಡೆಯಲಾಯಿತು. ಆ.ಸ.ನೌ ರವರು ತಮ್ಮ ಪರವಾಗಿ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲವಾದ್ದರಿಂದ ದಿನಾಂಕ: 13/09/2017 ರಂದು ಆ.ಸ.ನೌ ರವರ ಲಿಖಿತ ಹೇಳಿಕೆ ಸಲ್ಲಿಸಿಲ್ಲ ಎಂದು ಆದೇಶಿಸಲಾಗಿದೆ.

15. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ. ಶಾಂತ, ಕಲಿಯೂರು ಗ್ರಾಮ ಪಂಚಾಯತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರನ್ನು ಪಿ.ಡಬ್ಲ್ಯೂ–1 ಎಂದು, ಶ್ರೀ. ಬಿ.ಎಸ್. ರಾಜು, ಕಾರ್ಯನಿರ್ವಾಹಕ ಅಧಿಕಾರಿ, ಯಳಂದೂರು ತಾಲ್ಲೂಕು ಪಂಚಾಯತಿ ರವರನ್ನು ಪಿ.ಡಬ್ಲ್ಯೂ–2 ಎಂದು ಹಾಗೂ ಶ್ರೀಮತಿ. ಪದ್ಮಿನಿ ಎಂ.ಎಸ್, ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮೈಸೂರು ರವರನ್ನು ಪಿ.ಡಬ್ಲ್ಯೂ–3 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–1 ರಿಂದ ನಿ.ಪಿ–11 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಯನ್ನು ದಿನಾಂಕ : 08/03/2021 ರಂದು ಪಡೆದುಕೊಳ್ಳಲಾಗಿರುತ್ತದೆ.

16. ಆ.ಸ.ನೌ ರವರು ಸ್ವತ: ಡಿ.ಡಬ್ಲ್ಯೂ–1 ರಂತೆ ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿಶಾನೆ ಡಿ–1 ರಿಂದ ನಿಶಾನೆ.ಡಿ–3 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

17. ಮಂಡನಾಧಿಕಾರಿಯವರ ಮತ್ತು ಆ.ಸ.ನೌ ರವರ ಪರ ವಕೀಲರ ವಾದ ಆಲಿಸಿದೆ ಮತ್ತು ಆ.ಸ.ನೌ ರವರ ವಕೀಲರು ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಿದೆ.

18. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?**

**ಅಂಶ-2: ಆದೇಶವೇನು?**

19. ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

20. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ-1) ನಕಾರಾತ್ಮಕವಾಗಿದೆ.**

**ಅಂಶ-2) ಅಂತಿಮ ಆದೇಶದಂತೆ.**

## ಕಾರಣಗಳು

21. **ಅಂಶ-1** : ಈ ಪ್ರಕರಣದಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಶಾಂತ, ಕಲಿಯೂರು ಗ್ರಾಮ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರನ್ನು ಪಿ.ಡಬ್ಲ್ಯೂ-1 ಎಂದು, ಶ್ರೀ. ಬಿ.ಎಸ್. ರಾಜು, ಕಾರ್ಯನಿರ್ವಾಹಕ ಅಧಿಕಾರಿ,

ಯಳಂದೂರು ತಾಲ್ಲೂಕು ಪಂಚಾಯತಿ ರವರನ್ನು ಪಿ.ಡಬ್ಲ್ಯೂ-2 ಎಂದು ಹಾಗೂ ಶ್ರೀಮತಿ. ಪದ್ಮಿನಿ ಎಂ.ಎಸ್, ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮೈಸೂರು ರವರನ್ನು ಪಿ.ಡಬ್ಲ್ಯೂ-3 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-11 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

22. ಪಿ.ಡಬ್ಲ್ಯೂ-1/ಶ್ರೀ. ಶಾಂತ ರವರು ತನಗೆ ಆ.ಸ.ನೌ ರವರ ಪರಿಚಯವಿದೆ. ಅವರು ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ. ಆಗಿ 2012 ರಿಂದ 2014 ರ ಅವಧಿಯಲ್ಲಿ ಕೆಲಸ ನಿರ್ವಹಿಸಿರುತ್ತಾರೆ ಹಾಗೂ ಶ್ರೀ. ದೇವರಾಜ್ ಎಂಬುವರು ಬಿಲ್ ಕಲೆಕ್ಟರ್ ಆಗಿದ್ದರು. ಆ.ಸ.ನೌ ರವರ ಅವಧಿಯಲ್ಲಿ ಕಂದಾಯವನ್ನು ವಿವಿಧ ಮೂಲಗಳಿಂದ ವಸೂಲಾತಿ ಮಾಡಿದ್ದು, ಅದರ ಮೊತ್ತವು ಸುಮಾರು ರೂ.4 ರಿಂದ 5 ಲಕ್ಷದಷ್ಟಾಗಿರುತ್ತದೆ. ಆದರೆ ಅವರು ಅದನ್ನು ಬ್ಯಾಂಕಿಗೆ ಜಮಾ ಮಾಡದೆ, ತಮ್ಮ ಸ್ವಂತಕ್ಕೆ ಬಳಸಿಕೊಂಡಿರುವುದು ತನ್ನ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ತಾನು ಮಾನ್ಯ ಲೋಕಾಯುಕ್ತರಿಗೆ ದೂರನ್ನು ಸಲ್ಲಿಸಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ತಮ್ಮ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಿರುತ್ತಾರೆ. ಪ್ರಪತ್ರ 1 ಮತ್ತು 2 ಅನ್ನು ನಿ.ಪಿ.2 ಮತ್ತು 3 ಎಂದು ಹಾಗೂ ಅವುಗಳಲ್ಲಿಯ ತಮ್ಮ ಸಹಿಯನ್ನು ನಿ.ಪಿ.2(ಎ) ಮತ್ತು ನಿ.ಪಿ.3(ಎ) ಎಂದು ಗುರುತಿಸಿರುತ್ತಾರೆ.

23. ಆ.ಸ.ನೌ ರವರ ಪರ ವಕೀಲರು ನಡೆಸಿದ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ತಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ತಾನು ಆ.ಸ.ನೌ ರವರ ವಿರುದ್ಧ ಲೋಕಾಯುಕ್ತ ಕಚೇರಿಗೆ ಒಟ್ಟು 4 ದೂರುಗಳನ್ನು ಸಲ್ಲಿಸಿದ್ದೇನೆ. ತಾನು ಈ ದೂರನ್ನು ಬಿಲ್ ಕಲೆಕ್ಟರ್ ದೇವರಾಜ್ ರವರ ವಿರುದ್ಧ ನೀಡಿದ್ದೇನೆ ಅನ್ನೋದು ನಿಜ. ತಾನು ಈ ದೂರನ್ನು ಆ.ಸ.ನೌ ರವರ ವಿರುದ್ಧ ನೀಡಿಲ್ಲ ಅನ್ನೋದು ನಿಜ. ಸದರಿ ದೂರಿಗೆ ಸಂಬಂಧಪಟ್ಟಂತೆ ತಾನು ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಸದರಿ ಕರವಸೂಲಾತಿಗೆ

ಸಂಬಂಧಪಟ್ಟಂತೆ ಆಡಿಟ್ ಮಾಡಲಾಗಿದೆ. ತಾನು ಈ ಪ್ರಕರಣದ ತನಿಖಾ ವರದಿಯನ್ನು ನೋಡಿರುವುದಿಲ್ಲ. ತನಗೆ ಪ್ರತ್ಯುತ್ತರವನ್ನು ನೀಡುವಂತೆ ಈ ಸಂಸ್ಥೆಯಿಂದ ತಿಳಿಸಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

24. ಮುಂದುವರೆದ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ನೀವು ದೂರನ್ನು ಕೇವಲ ದೇವರಾಜ್ ಎಂಬುವವರ ವಿರುದ್ಧ ನೀಡಿದ್ದೀರಿ ಎಂಬ ಪ್ರಶ್ನೆಗೆ ತಾನು ದೂರನ್ನು ದೇವರಾಜ್ ಹಾಗೂ ರಾಜ್‌ಕುಮಾರ್ ರವರ ವಿರುದ್ಧ ನೀಡಿದ್ದೇನೆ ಎಂದು ಉತ್ತರ ನೀಡಿರುತ್ತಾರೆ. ತಾನು ಕಂದಾಯ ರಸೀದಿಗಳನ್ನು ನೋಡಿ ದೂರು ಸಲ್ಲಿಸಿದ್ದೇನೆ. ಸದರಿ ರಸೀದಿಗಳನ್ನು ದೂರಿನೊಂದಿಗೆ ತಾನು ಲಗತ್ತಿಸಿಲ್ಲ, ಬೇಕಾದರೆ ಹಾಜರುಪಡಿಸುತ್ತೇನೆ. ತಾಲ್ಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರು ತನ್ನಿಂದ ರಸೀದಿಗಳನ್ನು ಪಡೆದಿರುವುದಿಲ್ಲ. ಕಂದಾಯ ವಸೂಲಿ ಮಾಡಿ, ಬ್ಯಾಂಕಿಗೆ ಜಮಾ ಮಾಡುವ ಕೆಲಸ ದೇವರಾಜ್ ರವರಿಗೆ ಸಂಬಂಧಪಟ್ಟ ಕೆಲಸ ಅನ್ನೋದು ನಿಜ ಎಂದು ಸಾಕ್ಷ್ಯ ನುಡಿದಿರುತ್ತಾರೆ.

25. ಮುಂದುವರೆದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯ್ಯೂ-1 ರವರು ತನಗೆ ಹಾಗೂ ದೇವರಾಜ್ ರವರ ಮಧ್ಯೆ ವೈಮನಸ್ಸು ಇದ್ದ ಕಾರಣ ಅವರ ವಿರುದ್ಧ ಹಾಗೂ ಆ.ಸ.ನೌ ರವರ ವಿರುದ್ಧ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅವ್ಯವಹಾರ 2012 ರಿಂದ 2015 ರವರೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಎಷ್ಟು ಟ್ಯಾಕ್ಸ್ ವಸೂಲಾಗಿದೆ ಎಂಬ ಬಗ್ಗೆ ದಾಖಲಾತಿಗಳನ್ನು ತಾನು ಹಾಜರುಪಡಿಸಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

26. ಪಿ.ಡಬ್ಲ್ಯೂ-2/ಶ್ರೀ. ಬಿ.ಎಸ್. ರಾಜು, ತಾಲ್ಲೂಕಾ ಕಾರ್ಯ ನಿರ್ವಹಣಾಧಿಕಾರಿ, ಯಳಂದೂರು ತಾಲ್ಲೂಕು ಪಂಚಾಯತಿ ರವರು ತನ್ನ ಮುಖ್ಯ ವಿಚಾರಣೆಯಲ್ಲಿ ತಾನು ದಿನಾಂಕ : 01/01/2016 ರಿಂದ 30/04/2018 ರವರೆಗೆ ಟಿ.ನರಸೀಪುರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಯಾಗಿ ಕೆಲಸ ಮಾಡಿದ್ದೇನೆ. ಆ.ಸ.ನೌ

ರಾಜಕುಮಾರ್ ರವರು ಟಿ.ನರಸೀಪುರ ತಾಲ್ಲೂಕು ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಹಾಗೂ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

27. ಪಿ.ಡಬ್ಲ್ಯೂ-2 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ದೇವರಾಜು ಎನ್ನುವವರು ಸದರಿ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದ ದೇವರಾಜು ಇವರು ತೆರಿಗೆ ವಸೂಲಾತಿಯಲ್ಲಿ ಸರ್ಕಾರಕ್ಕೆ ಕಟ್ಟಬೇಕಾದ ಬಾಕಿ ಹಣವನ್ನು ಕಟ್ಟಿರುವುದಿಲ್ಲವೆಂದು ಶ್ರೀ ಶಾಂತ ಇವರು ನೀಡಿದ ದೂರಿಗೆ ಸಂಬಂಧಪಟ್ಟಂತೆ ತನಿಖೆ ಮಾಡಿ, ವರದಿ ಸಲ್ಲಿಸುವಂತೆ ಲೋಕಾಯುಕ್ತ ಸಂಸ್ಥೆಯಿಂದ ಸೂಚನೆ ಬಂದ ಮೇರೆಗೆ ತಾನು ತನ್ನ ಕಚೇರಿಯ ಸಿಬ್ಬಂದಿಯನ್ನು ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ ವಸೂಲಾದ ತೆರಿಗೆ ಹಣ ಕುರಿತಂತೆ ಲೆಕ್ಕಪರಿಶೋಧನೆ ಮಾಡಿ ತಪಾಸಣಾ ವರದಿಯನ್ನು ನೀಡುವಂತೆ ಸೂಚಿಸಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ.

28. ಪಿ.ಡಬ್ಲ್ಯೂ-2 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಅದರಂತೆ, ತನಿಖಾ ತಂಡವು ದಿನಾಂಕ:17/03/2016 ರಂದು ಕಲಿಯೂರು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಗ್ರಾಮ ಪಂಚಾಯಿತಿಯ 2011-12, 2012-13 ಮತ್ತು 2013-14ನೇ ಸಾಲಿನ ಆಡಿಟ್ ವರದಿ ಹಾಗೂ ರಸೀದಿ ಪುಸ್ತಕಗಳನ್ನು ಪರಿಶೀಲಿಸಿ, ವರದಿಯನ್ನು ತನಗೆ ಸಲ್ಲಿಸಿದ್ದರು. ತಾನು ಸದರಿ ತನಿಖಾ ತಂಡ ಸಲ್ಲಿಸಿದ ವರದಿಯ ಮೇಲಿಂದ ಮತ್ತು ದಿನಾಂಕ : 01/04/2011 ರಿಂದ 31/12/2013 ರ ಅವಧಿಯಲ್ಲಿ ಕೆಲಸ ನಿರ್ವಹಿಸಿದ ಪಿ.ಡಿ.ಓ.ಗಳ ಮಾಹಿತಿಯನ್ನು ಸೇರಿಸಿ, ತನ್ನ ವರದಿಯನ್ನು ದಿನಾಂಕ :

30/04/2016 ರಂದು ಮಾನ್ಯ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

29. ಪಿ.ಡಬ್ಲ್ಯೂ-2 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ತಾನು ರಚಿಸಿದ ತಂಡವು ನೀಡಿದ ತನಿಖಾ ವರದಿ ಪ್ರಕಾರ ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ 2011-12ನೇ ಸಾಲಿನಲ್ಲಿ ಕರ ವಸೂಲಿ ಮಾಡಿದ ರೂ.68,660/-ಗಳು, 2012-13ನೇ ಸಾಲಿನಲ್ಲಿ ವಸೂಲು ಮಾಡಿದ ರೂ.1,01,650/-ಗಳು ಮತ್ತು 2013-14ನೇ ಸಾಲಿನಲ್ಲಿ ವಸೂಲು ಮಾಡಿದ ರೂ.1,37,941/- ಗಳನ್ನು ಸರ್ಕಾರಕ್ಕೆ ಜಮಾ ಮಾಡದೆ, ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಹಾಗೂ ಗ್ರಾಮ ಪಂಚಾಯಿತಿ ರಸೀದಿ ಪುಸ್ತಕಗಳನ್ನು ಪರಿಶೀಲಿಸಿದಾಗ ಬಿಲ್ ಕಲೆಕ್ಟರ್ ದೇವರಾಜ್ ಹಾಗೂ ಆಗಿನ ಕಾರ್ಯದರ್ಶಿಯಾದ ಆ.ಸ.ನೌ ಶ್ರೀ. ಎಸ್.ರಾಜ್‌ಕುಮಾರ್ ಇವರಿಬ್ಬರೂ ತೆರಿಗೆ ವಸೂಲಾತಿ ಮಾಡಿರುವುದು ಕಂಡು ಬಂದಿರುತ್ತದೆ ಎಂದು ವರದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

30. ಪಿ.ಡಬ್ಲ್ಯೂ-2 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ತಾನು ಲೋಕಾಯುಕ್ತ ಸಂಸ್ಥೆಗೆ ದಿನಾಂಕ : 30/04/2016 ರಂದು ಸಲ್ಲಿಸಿದ ವರದಿಯನ್ನು ನಿ.ಪಿ.4 ಎಂದು, ಮತ್ತು ಅದರಲ್ಲಿಯ ತನ್ನ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಿರುತ್ತಾರೆ. ತನಿಖಾ ತಂಡ ತನಗೆ ಸಲ್ಲಿಸಿದ್ದ ತನಿಖಾ ವರದಿಯನ್ನು ನಿ.ಪಿ.5 (ಒಟ್ಟು 13 ಹಾಳೆಗಳು) ಎಂದು ಗುರುತಿಸಿರುತ್ತಾರೆ. ನಿ.ಪಿ-5 ರ ದಾಖಲಾತಿಯಲ್ಲಿ 2011-12, 2012-13 ಮತ್ತು 2013-14 ರಲ್ಲಿ ಬಿಲ್ ಕಲೆಕ್ಟರ್ ದೇವರಾಜ್ ಮತ್ತು ಆ.ಸ.ನೌ ರವರು ಸೇರಿ ಯಾರ್ಯಾರು ಎಷ್ಟೇಷ್ಟು ಹಣವನ್ನು ಯಾವ ರಸೀದಿಯ ಕೆಳಗೆ ಯಾವ ದಿನಾಂಕದಂದು ಕರ ವಸೂಲಿ ಮಾಡಿರುತ್ತಾರೆ ಎನ್ನುವ ಬಗ್ಗೆ ಮಾಹಿತಿ ಪಟ್ಟಿ ಇರುತ್ತದೆ.

31. ಪಿ.ಡಬ್ಲ್ಯೂ-2 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ತನಿಖಾ ತಂಡ ತಮ್ಮ ವರದಿಯೊಂದಿಗೆ ಸಲ್ಲಿಸಿದ ಕಲಿಯೂರು ಗ್ರಾಮ ಪಂಚಾಯಿತಿಯ 2011-12, 2012-13 ಮತ್ತು 2013-14ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಕ್ರಮವಾಗಿ ನಿ.ಪಿ.6 (ಒಟ್ಟು 14 ಹಾಳೆಗಳು), ನಿ.ಪಿ.7 (ಒಟ್ಟು 16 ಹಾಳೆಗಳು) ಮತ್ತು ನಿ.ಪಿ.8 (ಒಟ್ಟು 10 ಹಾಳೆಗಳು) ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ.

32. ಪಿ.ಡಬ್ಲ್ಯೂ-2 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಆಡಿಟ್ ವರದಿಯ ಪ್ರಕಾರ 2011-12ನೇ ಸಾಲಿನಲ್ಲಿ ಪಂಚಾಯಿತಿ ರಸೀದಿ ಪುಸ್ತಕಗಳ ಮೂಲಕ ಒಟ್ಟು ರೂ.4,62,920/-ಗಳನ್ನು ತೆರಿಗೆಯಾಗಿ ವಸೂಲು ಮಾಡಿದ್ದು, ಆದರೆ, ಆ ಪೈಕಿ ರೂ.3,94,260/- ಗಳನ್ನು ಮಾತ್ರ ಜಮಾ ಮಾಡಿ, ಉಳಿದ ರೂ.68,660/-ಗಳನ್ನು ಸರ್ಕಾರಕ್ಕೆ ಜಮಾ ಪಡಿಸದೇ ಇರುವುದು ಕಂಡು ಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

33. ಪಿ.ಡಬ್ಲ್ಯೂ-2 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಆಡಿಟ್ ವರದಿಯ ಪ್ರಕಾರ 2012-13ನೇ ಸಾಲಿನಲ್ಲಿ ಪಂಚಾಯಿತಿ ರಸೀದಿ ಪುಸ್ತಕಗಳ ಮೂಲಕ ಒಟ್ಟು ರೂ.1,82,600/- ಗಳನ್ನು ತೆರಿಗೆಯಾಗಿ ವಸೂಲು ಮಾಡಿದ್ದು, ಆದರೆ, ಆ ಪೈಕಿ ರೂ.80,950/- ಗಳನ್ನು ಮಾತ್ರ ಜಮಾ ಮಾಡಿ, ಉಳಿದ ರೂ.1,01,650/-ಗಳನ್ನು ಸರ್ಕಾರಕ್ಕೆ ಜಮಾ ಪಡಿಸದೇ ಇರುವುದು ಕಂಡು ಬರುತ್ತದೆ. ಆಡಿಟ್ ವರದಿಯ ಪ್ರಕಾರ 2013-14ನೇ ಸಾಲಿನಲ್ಲಿ ಪಂಚಾಯಿತಿ ರಸೀದಿ ಪುಸ್ತಕಗಳ ಮೂಲಕ ಒಟ್ಟು ರೂ.3,86,497/- ಗಳನ್ನು ತೆರಿಗೆಯಾಗಿ ವಸೂಲು ಮಾಡಿದ್ದು, ಆದರೆ, ಆ ಪೈಕಿ ರೂ.2,48,556/- ಗಳನ್ನು ಮಾತ್ರ ಜಮಾ ಮಾಡಿ, ಉಳಿದ ರೂ.1,37,941/-ಗಳನ್ನು ಸರ್ಕಾರಕ್ಕೆ ಜಮಾ ಪಡಿಸದೇ ಇರುವುದು ಕಂಡು ಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

34. ಆ.ಸ.ನೌ ರವರ ಪರ ವಕೀಲರು ನಡೆಸಿದ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ಕಲಿಯೂರು ಗ್ರಾಮಪಂಚಾಯಿತಿ ಪ್ರಭಾರ ಪಿ.ಡಿ.ಓ ಆಗಿ ಸುಮಾರು 17 ತಿಂಗಳು ಕೆಲಸ ಮಾಡಿದ್ದಾರೆ. ಸದರಿ ಅವಧಿಯನ್ನು ತನ್ನ ವರದಿಯಲ್ಲಿ ಕಾಣಿಸಿದ್ದೇನೆ. ಆ.ಸ.ನೌ ರವರು ಸದರಿ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದುದ್ದರ ಜೊತೆಗೆ ಪ್ರಭಾರಿ ಪಿ.ಡಿ.ಓ. ಆಗಿಯೂ ಸಹ ಕೆಲಸ ಮಾಡಿದ್ದಾರೆ. ಆ.ಸ.ನೌ ರವರು 2011-12 ನೇ ಸಾಲಿನಲ್ಲಿ ಪ್ರಭಾರ ಪಿ.ಡಿ.ಓ ಆಗಿ ಕೆಲಸ ಮಾಡಿಲ್ಲ ಅನ್ನೋದು ನಿಜ. 2012-13ನೇ ಸಾಲಿನಲ್ಲಿ 8 ತಿಂಗಳ ಅವಧಿಗೆ ಮತ್ತು 2013-14ನೇ ಸಾಲಿನಲ್ಲಿ 9 ತಿಂಗಳ ಅವಧಿಗೆ ಪ್ರಭಾರ ಪಿ.ಡಿ.ಓ ಆಗಿ ಕೆಲಸ ಮಾಡಿದ್ದಾರೆ ಅನ್ನೋದು ನಿಜ ಎಂದು ಸಾಕ್ಷ್ಯ ನುಡಿದಿರುತ್ತಾರೆ.

35. ಮುಂದುವರೆದ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ತೆರಿಗೆ ಹಣವನ್ನು ಬಿಲ್ ಕಲೆಕ್ಟರ್ ಸಂಗ್ರಹಿಸಬೇಕು ಅನ್ನುವುದು ನಿಜ, ಸಂಗ್ರಹಿಸಿದ ಹಣವನ್ನು ಆಯಾ ದಿನಾಂಕಗಳಂದು ಪರಿಶೀಲಿಸಿ, ಅದನ್ನು ಸರ್ಕಾರಕ್ಕೆ ಜಮಾ ಪಡಿಸುವುದು ಪಿ.ಡಿ.ಓ ರವರ ಜವಾಬ್ದಾರಿಯಾಗಿರುತ್ತದೆ. ಆಡಿಟ್ ವರದಿಯ ಪ್ರಕಾರ ಆಯಾಯ ವರ್ಷ ಆಡಿಟ್ ಮಾಡಿಲ್ಲ ಅನ್ನೋದು ಸರಿಯಲ್ಲ. ಆಡಿಟ್ ವರದಿಯ ಪ್ರಕಾರ ಕಡಿಮೆ ಹಣ ಜಮಾ ಮಾಡಿದ ಬಗ್ಗೆ ಕಲಿಯೂರು ಗ್ರಾಮ ಪಂಚಾಯಿತಿ ಪಿ.ಡಿ.ಓ ರವರಿಗೆ ತಾನು ನೋಟೀಸ್ ಕೊಟ್ಟಿರುವುದಿಲ್ಲ. ಏಕೆಂದರೆ, ತಾನು ಆಗ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡು ಕೇವಲ 3 ತಿಂಗಳು ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

36. ಮುಂದುವರೆದ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ನಿ.ಪಿ.6 ರಿಂದ ನಿ.ಪಿ.8 ವರದಿಗಳ ಪ್ರಕಾರ ತಾಲ್ಲೂಕಾ ಪಂಚಾಯಿತಿಯವರು ಕ್ರಮ ತೆಗೆದುಕೊಂಡ ಬಗ್ಗೆ ತನಗೆ ಮಾಹಿತಿ ಇಲ್ಲ. ಆ.ಸ.ನೌ ರವರಿಂದ ಸದರಿ 3 ವರ್ಷಗಳಲ್ಲಿ ಎಷ್ಟು ಹಣ ಸರ್ಕಾರಕ್ಕೆ ನಷ್ಟವಾಗಿದೆ ಎಂದು ತಾನು ಹೇಳಿಲ್ಲ ಅಂದರೆ ಸರಿಯಲ್ಲ. ತಾನು ಯಾವುದೇ

ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸದೇ, ಕೇವಲ ಆಡಿಟ್ ವರದಿಯ ಆಧಾರದ ಮೇಲೆ ಆ.ಸ.ನೌ ರವರು ಸರ್ಕಾರಕ್ಕೆ ನಷ್ಟ ಉಂಟುಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ತಾನು ವರದಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

37. ಪಿ.ಡಬ್ಲ್ಯೂ-3/ಶ್ರೀಮತಿ. ಪದ್ಮಿನಿ ಎಂ.ಎಸ್, ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮೈಸೂರು ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಮೈಸೂರಿನ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕಚೇರಿಯಲ್ಲಿ ತಾನು ಜುಲೈ 2021 ರಿಂದ ಕೆಲಸ ಮಾಡುತ್ತಿದ್ದೇನೆ. ಆ ಹಿಂದೆ ತಾನು ಅದೇ ಕಚೇರಿಯಲ್ಲಿ 2014 ರಿಂದ 2016 ರವರೆಗೆ ಸೇವೆ ಸಲ್ಲಿಸಿದ್ದೇನೆ. ಕರ್ನಾಟಕ ರಾಜ್ಯ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನಾ ಇಲಾಖೆ, ನಿಯಂತ್ರಕರ ಪರವಾಗಿ ಪಂಚಾಯತ್ ಅಧಿನಿಯಮ ಕಲಂ 246(1) ರಂತೆ ಟಿ. ನರಸೀಪುರ ತಾಲ್ಲೂಕು, ಕಲಿಯೂರು ಗ್ರಾಮ ಪಂಚಾಯತ್ 2011-12, 2012-13 ಹಾಗೂ 2013-14 ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿ ವರದಿಗಳನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

38. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, 2011-12 ನೇ ಸಾಲಿನ ಲೆಕ್ಕಪರಿಶೋಧನಾ ಸಮಯದಲ್ಲಿ ವರದಿಯ ಕಂಡಿಕೆ 20 ರಲ್ಲಿ ತೆರಿಗೆ ಆದಾಯ ವಸೂಲಿ ಪೂರ್ಣ ಜಮೆ ಮಾಡದೇ ಇರುವುದು ರೂ.68,660/- ವಸೂಲಾತಿಗೆ ಸೂಚಿಸಿದ್ದೇವೆ. ಕಂಡಿಕೆ 24 ರಲ್ಲಿ ನಿಧಿ 1 ರಲ್ಲಿ ವಿತರಿಸಿದ ಧನಾದೇಶ 2 ಬಾರಿ ಪಾವತಿ ರೂ.628/- ವಸೂಲಾತಿಗೆ ಸೂಚಿಸಿದ್ದೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

39. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 25 ನಿಧಿ 1 ರ ಖಾತೆಯ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ

ಹಾಜರುಪಡಿಸಿರುವುದಿಲ್ಲ. ರೂ.1,37,748/- ಗಳನ್ನು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 20 ರಲ್ಲಿ ಸಿಬ್ಬಂದಿ ವೇತನಾ ಖಾತೆಗೆ ಸಂಬಂಧಿಸಿದ ಮಾಹಿತಿ ಹಾಜರುಪಡಿಸಿಲ್ಲ ರೂ.89,500/- ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 30 13ನೇ ಹಣಕಾಸು ಯೋಜನೆ ವೋಚರ್ ಹಾಜರುಪಡಿಸಿಲ್ಲ ರೂ.1,30,430/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

40. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 33 ಎನ್.ಆರ್.ಇ.ಜಿ.ಎ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.13,95,181/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 35 ಇಂದಿರಾ ಆವಾಜ್ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.55,000/- ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 38 ಆಶ್ರಯ ಯೋಜನೆಯ ವೋಚರ್ ಹಾಜರುಪಡಿಸಿಲ್ಲ. ರೂ.2,90,488/-ಗಳ ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

41. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 40 ಸಂಪೂರ್ಣ ಗ್ರಾಮ ನೈರ್ಮಲ್ಯ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.72,000/- ಗಳ ಆಕ್ಷೇಪಣೆ ಇಟ್ಟಿರುತ್ತೇವೆ. ಕಂಡಿಕೆ 44 ಎಸ್.ಸಿ/ಎಸ್.ಟಿ ಖಾತೆ ವೋಚರ್‌ಗಳನ್ನು ಹಾಜರುಪಡಿಸಿಲ್ಲ. ರೂ.36,275/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 46 ನೀರು ನೈರ್ಮಲ್ಯ ಖಾತೆ ವೋಚರ್ ಹಾಜರು ಪಡಿಸಿಲ್ಲ ರೂ.59,100/- ಗಳನ್ನು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

42. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 48 ಕಾಮಗಾರಿ ಬಿಲ್ಲಿನಲ್ಲಿ ಕಟಾಯಿಸಿರುವ ಮೊತ್ತದ ಬಗ್ಗೆ ರೂ.26,145/- ಗಳನ್ನು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಒಟ್ಟಾರೆಯಾಗಿ ರೂ.22,91,867/- ಗಳು ಆಕ್ಷೇಪಣೆ

ಮೊಬಲಗು ಆಗಿರುತ್ತದೆ ಹಾಗೂ ರೂ.69,358/-ಗಳು ವಸೂಲಾತಿಗೆ ಸೂಚಿಸಲ್ಪಟ್ಟಿರುತ್ತದೆ. ಸದರಿ 2011-12 ರ ಸಾಲಿನ ಲೆಕ್ಕಪರಿಶೋಧನಾ ವರದಿಯ ನಕಲನ್ನು ನೋಡಲಾಗಿ ಅದನ್ನು ಸಾಕ್ಷಿದಾರರು ತಂದಿರುವ ಮೂಲ ವರದಿಯನ್ನು ಪರಿಶೀಲಿಸಿದ್ದು, ಅದನ್ನು ನಿಶಾನೆ. ಪಿ-9 ಎಂದು ಗುರುತಿಸಿರುತ್ತಾರೆ.

43. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, 2012-13 ನೇ ಸಾಲಿನ ಲೆಕ್ಕಪರಿಶೋಧನಾ ಸಮಯದಲ್ಲಿ ವರದಿಯ ಕಂಡಿಕೆ 20 ರಲ್ಲಿ ತೆರಿಗೆ ಆದಾಯ ವಸೂಲಿ ಪೂರ್ಣ ಜಮೆ ಮಾಡದೇ ಇರುವುದು ರೂ.1,01,650/- ವಸೂಲಾತಿಗೆ ಸೂಚಿಸಲಾಗಿದೆ. ಕಂಡಿಕೆ 25 ನಿಧಿ 1 ರ ಖಾತೆಯ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ರೂ.1,93,769/- ಗಳನ್ನು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 27 ರಲ್ಲಿ ಸಿಬ್ಬಂದಿ ವೇತನಾ ಖಾತೆಗೆ ಸಂಬಂಧಿಸಿದ ಮಾಹಿತಿ ಹಾಜರುಪಡಿಸಿಲ್ಲ ರೂ.1,29,865/- ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

44. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 30 13ನೇ ಹಣಕಾಸು ಯೋಜನೆ ವೋಚರ್ ಹಾಜರುಪಡಿಸಿಲ್ಲ ರೂ.8,91,084/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 32 ಎನ್.ಆರ್.ಇ.ಜಿ.ಎ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.3,08,325/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 34 ಇಂದಿರಾ ಆವಾಜ್ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.20,91,050/- ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

45. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 36 ಆಶ್ರಯ ಯೋಜನೆಯ ವೋಚರ್ ಹಾಜರುಪಡಿಸಿಲ್ಲ. ರೂ.1,15,000/- ಗಳ

ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 39 ಸಂಪೂರ್ಣ ಗ್ರಾಮ ನೈರ್ಮಲ್ಯ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ. 2,55,050/- ಗಳ ಆಕ್ಷೇಪಣೆ ಇಟ್ಟಿರುತ್ತೇವೆ. ಕಂಡಿಕೆ 43 ಎಸ್.ಸಿ/ಎಸ್.ಟಿ ಖಾತೆ ವೋಚರ್‌ಗಳನ್ನು ಹಾಜರುಪಡಿಸಿಲ್ಲ. ರೂ.4.500/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಒಟ್ಟಾರೆಯಾಗಿ ರೂ.39,88,643/- ಗಳು ಆಕ್ಷೇಪಣೆ ಮೊಬಲಗು ಆಗಿರುತ್ತದೆ ಹಾಗೂ ರೂ.1,01,650/-ಗಳು ವಸೂಲಾತಿಗೆ ಸೂಚಿಸಲ್ಪಟ್ಟಿರುತ್ತದೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ.

46. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಸದರಿ 2012-13 ರ ಸಾಲಿನ ಲೆಕ್ಕಪರಿಶೋಧನಾ ವರದಿಯ ನಕಲನ್ನು ನೋಡಲಾಗಿ ಅದನ್ನು ಸಾಕ್ಷಿದಾರರು ತಂದಿರುವ ಮೂಲ ವರದಿಯನ್ನು ಪರಿಶೀಲಿಸಿದ್ದು, ಅದನ್ನು ನಿಶಾನೆ ಪಿ-10 ಎಂದು ಗುರುತಿಸಿರುತ್ತಾರೆ. 2013-14 ನೇ ಸಾಲಿನ ಲೆಕ್ಕಪರಿಶೋಧನಾ ಸಮಯದಲ್ಲಿ ವರದಿಯ ಕಂಡಿಕೆ 20 ರಲ್ಲಿ ತೆರಿಗೆ ಆದಾಯ ವಸೂಲಿ ಪೂರ್ಣ ಜಮೆ ಮಾಡದೇ ಇರುವುದು ರೂ.1,37,941/- ವಸೂಲಾತಿಗೆ ಸೂಚಿಸಿರುತ್ತಾರೆ. ಕಂಡಿಕೆ 25 ರಲ್ಲಿ ನಿಧಿ (1) ರ ಖಾತೆಯ ವೋಚರ್ ಹಾಜರುಪಡಿಸಿಲ್ಲ ರೂ.4,66,086/- ಆಕ್ಷೇಪಣೆಯಲ್ಲಿ ಇಡಲಾಗಿದೆ. ಕಂಡಿಕೆ 27 ನಿಧಿ 1 ರ ಖಾತೆಯ ವೋಚರ್ ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ರೂ. 4,66,086/- ಗಳನ್ನು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

47. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 27 ರಲ್ಲಿ ಸಿಬ್ಬಂದಿ ವೇತನಾ ಖಾತೆಗೆ ಸಂಬಂಧಿಸಿದ ಮಾಹಿತಿ ಹಾಜರುಪಡಿಸಿಲ್ಲ ರೂ. 97,730/- ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 30ರ 13ನೇ ಹಣಕಾಸು ಯೋಜನೆ ವೋಚರ್ ಹಾಜರುಪಡಿಸಿಲ್ಲ ರೂ.5,84,142/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ

32 ಎನ್.ಆರ್.ಇ.ಜಿ.ಎ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.1,14,835/- ಗಳು ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

48. ಪಿ.ಡಬ್ಲ್ಯೂ-3 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಕಂಡಿಕೆ 34 ಇಂದಿರಾ ಆವಾಜ್ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.1,90,000/- ಆಕ್ಷೇಪಣೆಯಲ್ಲಿ ಇಟ್ಟಿರುತ್ತೇವೆ. ಕಂಡಿಕೆ 38 ಸಂಪೂರ್ಣ ಗ್ರಾಮ ನೈರ್ಮಲ್ಯ ಯೋಜನೆ ವೋಚರ್ ಹಾಜರುಪಡಿಸಿಲ್ಲ. ರೂ.1,26,900/- ಗಳ ಆಕ್ಷೇಪಣೆ ಇಟ್ಟಿರುತ್ತೇವೆ. ಒಟ್ಟಾರೆಯಾಗಿ ರೂ.15,79,693/- ಗಳು ಆಕ್ಷೇಪಣೆ ಮೊಬಲಗು ಆಗಿರುತ್ತದೆ ಹಾಗೂ ರೂ.1,37,941/-ಗಳು ವಸೂಲಾತಿಗೆ ಸೂಚಿಸಲ್ಪಟ್ಟಿರುತ್ತದೆ. ಸದರಿ 2013-14 ರ ಸಾಲಿನ ಲೆಕ್ಕಪರಿಶೋಧನಾ ವರದಿಯ ನಕಲನ್ನು ನೋಡಲಾಗಿ ಅದನ್ನು ಸಾಕ್ಷಿದಾರರು ತಂದಿರುವ ಮೂಲ ವರದಿಯನ್ನು ಪರಿಶೀಲಿಸಿದ್ದು, ಅದನ್ನು ನಿಶಾನೆ. ಪಿ-11 ಎಂದು ಗುರುತಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

49. ಆ.ಸ.ನೌ ರವರು ಡಿ.ಡಬ್ಲ್ಯೂ-1 ರವರಂತೆ ಸಾಕ್ಷ್ಯ ನುಡಿದಿರುತ್ತಾರೆ. ಡಿ.ಡಬ್ಲ್ಯೂ-1 ರವರು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಅದರಲ್ಲಿ ತಾನು 2011-12 ರಿಂದ 2013-14 ರವರೆಗೆ ಕಲಿಯೂರು ಗ್ರಾಮ ಪಂಚಾಯತಿಯಲ್ಲಿ ಪ್ರಭಾರ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಿರುವ ಕುರಿತಂತೆ, ದೇವರಾಜ್ ಎಂಬುವವರು ಆ ಕಾಲಕ್ಕೆ ಬಿಲ್ ಕಲೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ತೆರಿಗೆ ವಸೂಲಾತಿಯ ಕೆಲಸ ಬಿಲ್ ಕಲೆಕ್ಟರ್ ರವರೇ ಮಾಡುತ್ತಿದ್ದರು, ವಸೂಲಾದ ಎಲ್ಲಾ ಹಣವನ್ನು ಅವರೇ ಬ್ಯಾಂಕಿಗೆ ಜಮಾ ಮಾಡಬೇಕಾಗಿದ್ದು, ನಂತರ ತನಗೆ ಲೆಕ್ಕವನ್ನು ಕೊಡಬೇಕಾಗಿದ್ದು ಮತ್ತು ಕೆಲಸದ ಒತ್ತಡವಿದ್ದುದ್ದಕ್ಕಾಗಿ ತನಗೆ ಪದೇ ಪದೇ ವಿಚಾರಿಸಲು ಸಾಧ್ಯವಾಗದೇ ಇದ್ದಾಗ ನಂತರ ಆಡಿಟ್ ವರದಿಯಲ್ಲಿಯೂ ಸಹ ವ್ಯತ್ಯಾಸ ಆಗಿರುವುದು ತಿಳಿದು ಬಂದು ಹಣ ಕಟ್ಟುವಂತೆ

ಬಿಲ್ ಕಲೆಕ್ಟರ್‌ಗೆ ಹೇಳಿದ್ದರೂ ಸಹ ಅವರು ಕಟ್ಟದೇ ಇದ್ದುದ್ದರಿಂದ ಎಲ್ಲಾ ಆರೋಪವು ಸಹ ತನ್ನ ಮೇಲೆ ಬಂದಿರುತ್ತದೆ ಹಾಗೂ ಎಲ್ಲಾ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ ಎಂದು ತಿಳಿಸಿರುತ್ತಾರೆ. ಆ.ಸ.ನೌ ರವರು ಮುಂದುವರೆದು ಪ್ರಕರಣದಲ್ಲಿಯ ದೋಷಾರೋಪಣೆ ಕುರಿತಂತೆ ತನಗೆ ಈ ಹಿಂದೆ ಉಪ ಕಾರ್ಯದರ್ಶಿ (ಅಭಿವೃದ್ದಿ) ಜಿಲ್ಲಾ ಪಂಚಾಯತ್, ಮೈಸೂರು ಇವರು ಆದೇಶ ಸಂಖ್ಯೆ. ಸಿಸಿಎ/36, 2014-15/14091 ದಿನಾಂಕ : 30/10/2018 ರಂದು ಅಮಾನತ್ತು ಆದೇಶ ನೀಡಿರುತ್ತಾರೆ ಮತ್ತು ಇದಕ್ಕೆ ತಾನು ಮೇಲ್ಮನವಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರಿಗೆ ಸಲ್ಲಿಸಿದ್ದು, ಇವರು ಸಹ ಕೆಳಗಿನ ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಮೈಸೂರು ಇವರು ಕಡ್ಡಾಯ ನಿವೃತ್ತಿಗೊಳಿಸಿರುವ ದಂಡನೆಯನ್ನು ಎತ್ತಿ ಹಿಡಿದು ಆದೇಶಿಸಿರುತ್ತಾರೆ. ಅದಕ್ಕೆ ತಾನು ಸದರಿ ಆದೇಶಕ್ಕೆ ಮಾನ್ಯ ಕೆ.ಎ.ಟಿ ನ್ಯಾಯಾಲಯ ಬೆಳಗಾವಿಯಲ್ಲಿ ಮಧ್ಯಂತರ ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳಿ ಆದೇಶದ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ಈ ಕಾರಣದಿಂದ ತನಗೆ ಈಗಾಗಲೇ ಸರ್ಕಾರಿ ನೌಕರಿಯಿಂದ "ಕಡ್ಡಾಯ ನಿವೃತ್ತಿ" ಆದೇಶವನ್ನು ನೀಡಿರುವುದರಿಂದ ಈ ಇಲಾಖಾ ವಿಚಾರಣೆಯನ್ನು ಕೈ ಬಿಡಬೇಕೆಂದು ಕೇಳಿಕೊಂಡಿರುತ್ತಾರೆ ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

1. ಉಪಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಮೈಸೂರು ರವರ ದಿನಾಂಕ: 30/10/2018ರ ಆದೇಶದ ಜೆ಼ರಾಕ್ ಪ್ರತಿಯನ್ನು ನಿ.ಡಿ.1 ಎಂದು ಗುರುತಿಸಿರುತ್ತಾರೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರ ದಿನಾಂಕ : 12/07/2019ರ ಆದೇಶದ ಜೆ಼ರಾಕ್ಸ್ ಪ್ರತಿಯನ್ನು ನಿ.ಡಿ.2 ಎಂದು ಗುರುತಿಸಿರುತ್ತಾರೆ.

3. ಕೆ.ಎ.ಟಿ, ಬೆಳಗಾವಿ ಅಪ್ಲಿಕೇಶನ್ ನಂ.2295 ರ 22/07/2020 ರ ಆದೇಶದ ಜೆ಼ರಾಕ್ಸ್ ಪ್ರತಿಯನ್ನು ನಿ.ಡಿ.3 ಎಂದು ಗುರುತಿಸಿರುತ್ತಾರೆ.

50. ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ–1 ರಿಂದ 3 ರವರ ಹೇಳಿಕೆಗಳನ್ನು ಹಾಗೂ ನಿಶಾನೆ ಪಿ–1 ರಿಂದ ನಿಶಾನೆ ಪಿ–11 ರ ದಾಖಲಾತಿಗಳನ್ನು ಪರಿಶೀಲಿಸಲಾಯಿತು ಮತ್ತು ಆ.ಸ.ನೌ ರವರು ತಮ್ಮ ಪರವಾಗಿ ನೀಡಿದ ಸಾಕ್ಷ್ಯವನ್ನು ಹಾಗೂ ನಿಶಾನೆ ಡಿ–1 ರಿಂದ ನಿಶಾನೆ ಡಿ–3 ದಾಖಲಾತಿಗಳನ್ನು ಪರಿಶೀಲಿಸಲಾಯಿತು.

51. ದೂರುದಾರರಾದ ಸಾಕ್ಷಿ–1 ಶಾಂತ ರವರು ಆ.ಸ.ನೌ ರವರು ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ ಆಗಿ 2012 ರಿಂದ 2014 ರ ಅವಧಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಕಂದಾಯವನ್ನು ವಿವಿಧ ಮೂಲಗಳಿಂದ ವಸೂಲಾತಿ ಮಾಡಿ ಸುಮಾರು 4 ರಿಂದ 5 ಲಕ್ಷ ಹಣವನ್ನು ಬ್ಯಾಂಕಿಗೆ ಜಮಾ ಮಾಡದೇ ಸ್ವಂತಕ್ಕೆ ಬಳಸಿಕೊಂಡಿರುವುದು ತನ್ನ ಗಮನಕ್ಕೆ ಬಂದಿದ್ದರಿಂದ ಈ ಕುರಿತಂತೆ ತನಿಖೆ ಮಾಡಿ ಕ್ರಮ ಕೈಗೊಳ್ಳುವಂತೆ ಕೋರಿ ನಿ.ಪಿ–1 ರಂತೆ ಮಾನ್ಯ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ. ಅದರ ಜೊತೆಗೆ ಪ್ರಮಾಣ ಪತ್ರಗಳನ್ನು ಸಹ ನಿ.ಪಿ–2 ಮತ್ತು 3 ರಂತೆ ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಆ.ಸ.ನೌ ರವರು ಪಂಚಾಯತಿ ಕರ ವಸೂಲಿ ಮಾಡಿ ಬ್ಯಾಂಕಿಗೆ ಜಮಾ ಮಾಡದೇ ದುರ್ನಡತೆ ಎಸಗುತ್ತಿರುವುದು ತನಗೆ ಕಂಡು ಬಂದಿದ್ದರಿಂದ ಕಾನೂನು ರೀತಿಯ ಕ್ರಮ ಕೈಗೊಳ್ಳಲು ದೂರನ್ನು ಸಲ್ಲಿಸುವುದರ ಮೂಲಕ ಚಾಲನೆ ನೀಡಿರುತ್ತಾರೆ.

52. ಈ ಪ್ರಕರಣದಲ್ಲಿ ಹಾಜರಿಸಿರುವ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಕಂಡು ಬರುವ ಮುಖ್ಯ ಅಂಶಗಳೆಂದರೆ, ಈ ಸಂಸ್ಥೆಯಲ್ಲಿ ಸಲ್ಲಿಸಿರುವ ದೂರಿನಲ್ಲಿ ಮಾಡಿರುವ ಆಪಾದನೆಗಳ ವಿರುದ್ಧ ಈಗಾಗಲೇ ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್,

ಮೈಸೂರು ರವರ ಆದೇಶ ಸಂಖ್ಯೆ: ಸಿ.ಸಿ.ಎ/36/2014-15/14091 ರಲ್ಲಿ ವಿಚಾರಣೆ ಮಾಡಿ ದಿನಾಂಕ: 30/10/2018 ರಂದು ಶಿಕ್ಷೆ ವಿಧಿಸಿರುತ್ತಾರೆ. ಸದರಿ ಆದೇಶದಲ್ಲಿ ಆ.ಸ.ನೌ ಶ್ರೀ. ಎಸ್. ರಾಜಕುಮಾರ್, ಗ್ರಾಮ ಪಂಚಾಯತ್, ಕಾರ್ಯದರ್ಶಿ ಗ್ರೇಡ್-2, ಕುರಿಹುಂಡಿ ಗ್ರಾಮ ಪಂಚಾಯತ್, ನಂಜನಗೂಡು ತಾಲ್ಲೂಕು ರವರು ಹಿಂದಿನ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಲಿಯೂರು ಗ್ರಾಮ ಪಂಚಾಯತ್, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆ ವಿಧಿಸಿ ಆದೇಶಿಸಿದೆ ಮತ್ತು ರೂ.10,37,359/- ಗಳನ್ನು ಆ.ಸ.ನೌಕರರ ನಿವೃತ್ತಿ ಸೌಲಭ್ಯಗಳಿಂದ ವಸೂಲಿ ಮಾಡಲು ಆದೇಶಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಆ.ಸ.ನೌಕರ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರ ಆದೇಶ ಸಂಖ್ಯೆ: ಸಿಸಿಎ/36/2014-15(ಭಾಗ)/ಮೇಲ್ಮನವಿ/14091 ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಸದರಿ ಮೇಲ್ಮನವಿಯು ದಿನಾಂಕ: 12/07/2019 ರಂದು ಭಾಗಶ: ಪುರಸ್ಕರಿಸಿ ಅಂದರೆ ಆದೇಶ ಸಂಖ್ಯೆ:ಸಿ.ಸಿ.ಎ/36/2014-15/14091 ರಲ್ಲಿ ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಮೈಸೂರು ರವರು ಮಾಡಿದ ಆದೇಶದಲ್ಲಿ ಮೊಬಲಗು ರೂ.10,37,359/- (ಹತ್ತು ಲಕ್ಷದ ಮೂವತ್ತೇಳು ಸಾವಿರದ ಮುನ್ನೂರ ಐವತ್ತೊಂಭತ್ತು ರೂಪಾಯಿಗಳು ಮಾತ್ರ) ರ ಬದಲು ರೂ.4,73,518/- (ನಾಲ್ಕು ಲಕ್ಷದ ಎಪ್ಪತ್ತಮೂರು ಸಾವಿರದ ಐದುನೂರ ಹದಿನೆಂಟು ರೂ. ಗಳು ಮಾತ್ರ) ಗಳನ್ನು ಆ.ಸ.ನೌಕರರ ನಿವೃತ್ತಿ ಸೌಲಭ್ಯಗಳಿಂದ ವಸೂಲಿ ಮಾಡಲು ಆದೇಶಿಸಿ ಹಾಗೂ ಆ.ಸ.ನೌಕರರ ಕಡ್ಡಾಯ ನಿವೃತ್ತಿ ದಂಡನೆಯ ಆದೇಶವನ್ನು ಎತ್ತಿ ಹಿಡಿದು ಆದೇಶಿರುತ್ತಾರೆ.

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಹಾಗೂ ಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳೆಂದರೆ ಈಗಾಗಲೇ ಈ ಪ್ರಕರಣದಲ್ಲಿ ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಮೈಸೂರು ಇವರು ವಿಚಾರಣೆ ಮಾಡಿ ಆ.ಸ.ನೌ ರವರಿಗೆ ಶಿಕ್ಷೆ ವಿಧಿಸಿರುತ್ತಾರೆ.

ಸದರಿ ಆದೇಶದ ವಿರುದ್ಧ ಆ.ಸ.ನೌ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಅಲ್ಲಿಯೂ ಸಹ ಆ.ಸ.ನೌ ರವರ ವಿರುದ್ಧ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಮೈಸೂರು ರವರು ಮಾಡಿದ ಕಡ್ಡಾಯ ನಿವೃತ್ತಿ ಆದೇಶವನ್ನು ಎತ್ತಿಹಿಡಿದು, ರೂ.10,37,359/- ಗಳನ್ನು ವಸೂಲಿ ಮಾಡುವ ಆದೇಶವನ್ನು ಸ್ವಲ್ಪ ಸಡಿಲಿಸಿ, ರೂ. 10,37,359/- ರ ಬದಲು ರೂ. 4,73,518/- ಗಳನ್ನು ಆ.ಸ.ನೌ ರವರ ನಿವೃತ್ತಿ ಸೌಲಭ್ಯದಿಂದ ಕಡಿತಗೊಳಸಲು ಆದೇಶಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಸಹ ಆ.ಸ.ನೌ ರವರು ಮಾನ್ಯ ಕೆ.ಎ.ಟಿ, ಬೆಳಗಾವಿ ಇಲ್ಲಿ ಅರ್ಜಿ ಸಲ್ಲಿಸಿ, ಸದರಿ ಆದೇಶಗಳಿಗೆ ತಾತ್ಕಾಲಿಕ ತಡೆಯಾಜ್ಞೆ ಪಡೆದಿರುತ್ತಾರೆ ಮೇಲಾಗಿ ಆ.ಸ.ನೌ ರವರು 2011-12ನೇ ಸಾಲಿನಲ್ಲಿ ಕಲಿಯೂರು ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿಲ್ಲ ಎಂದು ಪಿ.ಡಬ್ಲ್ಯೂ-2 ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಇದಕ್ಕೆ ಪೂರಕವಾಗಿ ನಿ.ಪಿ-4 ರಲ್ಲಿ ಆ.ಸ.ನೌ ರವರು ಕರ್ತವ್ಯ ನಿರ್ವಹಿಸಿರುವುದಿಲ್ಲ ಎನ್ನುವುದು ತಿಳಿಯುತ್ತದೆ. ಆದುದರಿಂದ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ಆ.ಸ.ನೌ ರವರಿಗೆ ಪುನ: ಶಿಕ್ಷೆ ವಿಧಿಸುವ ಅವಶ್ಯಕತೆ ಕಂಡು ಬರುವುದಿಲ್ಲ. ಆದುದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬಹುದು ಎಂದು ಅಭಿಪ್ರಾಯ ಪಡಲಾಗಿದೆ. ಮಾನ್ಯ ಕೆ.ಎ.ಟಿ ಯಲ್ಲಿ ಬಾಕಿ ಇರುವ ಅರ್ಜಿಯ ಮೇಲೆ ಯಾವುದೇ ಆದೇಶ ಹೊರಡಿಸಿದರೂ ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಅಭಿಪ್ರಾಯದೊಂದಿಗೆ ಮೇಲೆ ಹೇಳಿದ ಸಾಕ್ಷಿದಾರರುಗಳ ಹೇಳಿಕೆಗಳಿಂದ ಮತ್ತು ದಾಖಲಾತಿಗಳಿಂದ ಆ.ಸ.ನೌ ರವರ ಮೇಲೆ ಮಾಡಿರುವ ಆಪಾದನೆಗಳು ರುಜುವಾತಾಗದೇ ಇರುವುದರಿಂದ, ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ, ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುವುದಿಲ್ಲ. ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಲಾಗಿದೆ.**

## ವಿಚಾರಣಾ ವರದಿ

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಎಸ್. ರಾಜಕುಮಾರ್, ಹಿಂದಿನ ಕಾರ್ಯದರ್ಶಿ, ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಲಿಯೂರು ಗ್ರಾಮ ಪಂಚಾಯತ್, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪ ರುಜುವಾತುಪಡಿಸುವಲ್ಲಿ ವಿಫಲವಾಗಿದೆ ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

16/7

**(ಶೋಭಾ ಎಸ್)**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| File 3 | **Witness examined on behalf of the Disciplinary Authority** |
|---|---|
| | **PW-1**: Sri. Shantha (Original) |
| | **PW-2:** Sri. B.S. Raju (Original) |
| | **PW-3:** Sri. Padmini M.S. (Original) |
| | **Witness examined on behalf of the Defence** |
| | **DW-1:** Sri. S. Rajakumar (Original) |
| File 4 | **Documents marked on behalf of the Disciplinary Authority** |
| | **Ex. P-1**: Complaint (Original)<br>**Ex. P-1(a)**: Signature of the complainant |
| | **Ex.P-2**: Form No.I (Original)<br>**Ex. P-2(a)**: Signature of the complainant |
| | **Ex. P-3**: Form No-II (Original)<br>**Ex. P-3(a)**: Signature of the complainant |
| | **Ex.P-4**: The letter of Executive Office, Taluk Panchayath, T. Narasipura dated: 30/04/2016 addressed to Deputy Registrar of Enquiries-4, Karnataka Lokayukta, Bengaluru (Original)<br>**Ex. P-4(a)**: Signature of the complainant |
| | **Ex.P-5**: Investigation Report of I.O addressed to Executive Officer, Taluk Panchayath, T. Narasipura and connected documents (Xerox copies) |
| | **Ex.P-6:** The Letter of Assistant Controller, local Accounts Audit Circle, Mysore addressed to Panchayath Development |

| | |
|---|---|
| | Officer, Kaliyuru Grama Panchayath, T. Narasipura Taluk, Mysore District dated: 24/07/2015 (Xerox) |
| | **Ex.P-7:** The Letter of Assistant Controller, local Accounts Audit Circle, Mysore addressed to Panchayath Development Officer, Kaliyuru Grama Panchayath, T. Narasipura Taluk, Mysore District dated: 24/07/2015 (Xerox) |
| | **Ex.P-8:** The Letter of Assistant Controller, local Accounts Audit Circle, Mysore addressed to Panchayath Development Officer, Kaliyuru Grama Panchayath, T. Narasipura Taluk, Mysore District dated: 24/07/2015 and connected documents (Xerox) |
| | **Ex.P-9:** Allotment of recovery details of Myosre District, T. Narasipura Taluk, Kaliyuru Grama Panchayath for the year 2011-12 from Assistant Controller, local Accounts Audit Circle, Mysore and connected documents (Xerox copies) |
| | **Ex.P-10:** Allotment of recovery details of Myosre District, T. Narasipura Taluk, Kaliyuru Grama Panchayath for the year 2012-13 from Assistant Controller, local Accounts Audit Circle, Mysore and connected documents (Xerox copies) |
| | **Ex.P-11:** Allotment of recovery details of Myosre District, T. Narasipura Taluk, Kaliyuru Grama Panchayath for the year 2013-14 from Assistant Controller, local Accounts Audit Circle, Mysore and connected documents (Xerox copies) |
| | **Documents marked on behalf of the DGO** |
| | **Ex.D-1:** Deputy Secretary(Development) Zilla Panchayath, Mysore proceedings and order dated: 30/10/2018 (Xerox copies) |

| | |
|---|---|
| | **Ex.D-2:** The Chief Executive Officer, Zilla Panchayath, Mysore proceedings dated: 12/07/2019 (Xerox copies) |
| | **Ex.D-3:** The Karnataka State Administrative Tribunal at Belagavi Application No.2295/2020 order sheet (Xerox copies) |

**Dated this the 16th day of July 2022**

16/7

**(Shobha. S)**
Additional Registrar Enquiries-13
Karnataka Lokayukta
Bangalore.